ಕರ್ನಾಟಕ ವಿಧಾನ ಸಭೆ, ಸಂಶೋಧನೆ ಮತ್ತು ಉಲ್ಲೇಖನ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಂಸತ್

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 17/03/2020

# ರಾಜ್ಯಸಭೆ: ಸಂಸ್ಕೃತ ವಿವಿ ವಿಧೇಯಕ ಅಂಗೀಕಾರ

**ನವದೆಹಲಿ:** ದೇಶದಲ್ಲಿರುವ ಮೂರು ಸಂಸ್ಕೃತ ಕೇಂದ್ರ ವಿವಿಗಳನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ ಇರುವ ಕೇಂದ್ರೀಯ ಸಂಸ್ಕೃತ ವಿವಿ ವಿಧೇಯಕ 2019ನ್ನು ರಾಜ್ಯಸಭೆಯಲ್ಲಿ ಮಂಗಳವಾರ ಅನುಮೋದಿಸಲಾಗಿದೆ. ಹಲವು ತಿದ್ದುಪಡಿಗಳನ್ನು ಅದಕ್ಕೆ ಸೂಚಿಸಲಾಗಿದ್ದು, ಅದನ್ನು ಒಪ್ಪಿಕೊಳ್ಳಲಾಗಿದೆ. ಹೀಗಾಗಿ ಮತ್ತೆ ಅದು ಲೋಕಸಭೆಗೆ ವಾಪಸಾಗಲಿದೆ. ಕೇಂದ್ರ ಮಾನವ ಸಂಪನ್ಮೂಲಗಳ ಅಭಿವೃದ್ಧಿ ಖಾತೆ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ಮಾತನಾಡಿ ದೇಶದ ಎಲ್ಲಾ ಭಾಷೆಗಳನ್ನು ಬಲಪಡಿಸಲು ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದಾರೆ.

**6 ಲಕ್ಷ ಉದ್ದಿಮೆಗಳ ಪುನಾರಚನೆ:** ಸಣ್ಣ, ಅತಿಸಣ್ಣ ಮತ್ತು ಮಧ್ಯಮ ವಿಭಾಗಕ್ಕೆ ಸೇರಿದ ಆರು ಲಕ್ಷ ಉದ್ದಿಮೆಗಳನ್ನು ಪುನಾರಚಿಸಲಾಗಿದೆ ಎಂದು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ರಾಜ್ಯಸಭೆಗೆ ಸೋಮವಾರ ತಿಳಿಸಿದ್ದಾರೆ. ಸಣ್ಣ ಅತಿಸಣ್ಣ ಮತ್ತು ಮಧ್ಯಮ ಕೈಗಾರಿಕೆ ಖಾತೆಯನ್ನು ಹೊಂದಿರುವ ಅವರು, ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡಿ ಪುನಾರಚನೆಗೆ ಬೇಕಾಗಿರುವ ಅವಧಿ ವಿಸ್ತರಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತದೆ. ಅದು ಮುಕ್ತಾಯವಾದ ನಂತರ ಈ ಸಂಖ್ಯೆ ಹೆಚ್ಚಲಿದೆ ಎಂದು ಹೇಳಿದ್ದಾರೆ.